**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿಃ01.07.2026.**

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದ**

ಈ ಪ್ರಕರಣವನ್ನು ನಮ್ಮ ಫೈನಾನ್ಸ್ ಪರವಾಗಿ ದಾಖಲಿಸಿರುತ್ತೇನೆ. ಸುಮಾರು 10 ವರ್ಷಗಳ ಹಿಂದೆ ಫೈನಾನ್ಸ್ ನ್ನು ಪ್ರಾರಂಭ ಮಾಡಿರುತ್ತೇವೆ. 4 ವರ್ಷಗಳ ಹಿಂದೆಯೇ ಸನ್ಮತಿ ಫೈನಾನ್ಸ್ ನ್ನು ಮುಕ್ತಾಯಗೊಳಿಸಿದೆ. ಸಕಲೇಶಪುರ ಎಸ್ ಬಿ ಐ ಬ್ಯಾಂಕ್ ಬಳಿ ಮಾತ್ರ ಫೈನಾನ್ಸ್‌ನ ಕಚೇರಿ ಇತ್ತು. ಸದರಿ ಕಚೇರಿಯು ಲೋಕೇಶ ರವರಿಗೆ ಸೇರಿದ ಕಟ್ಟಡದಲ್ಲಿ ಇತ್ತು. ಫೈನಾನ್ಸ್ ನ ಲೈಸೆನ್ಸ್ ನನ್ನ ಬಳಿ ಇದೆ, ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ, ಅದರೆ ಅಗ್ರಿಮೆಂಟ್ ಪ್ರತಿ ವರ್ಷ ಬದಲಾಗುತ್ತಿದುದ್ದರಿಂದ ನಾನು ಅದನ್ನು ಇಟ್ಟುಕೊಂಡಿರುವುದಿಲ್ಲ. ಫೈನಾನ್ಸ್ ನಡೆಸಲು ಪುರಸಭೆಯಿಂದ ಲೈಸೆನ್ಸ್ ಪಡೆದಿರುವುದಿಲ್ಲ. ಫೈನಾನ್ಸ್ ಪರವಾಗಿ ಸುಮಾರು ಎಷ್ಟು ಕೇಸುಗಳನ್ನು ನಾನು ದಾಖಲಿಸಿರುತ್ತೇನೆಂದು ಹೇಳಲು ಸಾಧ್ಯವಿಲ್ಲ. ನಾನು ವೈಯಕ್ತಿವಾಗಿಯು ಸಹ ಚೆಕ್ ಅಮಾನತ್ಯ ಪ್ರಕರಣವನ್ನು ದಾಖಲಿಸಿದ್ದು, ಎಷ್ಟು ದಾಖಲಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ಹೇಮಾವತಿ ಅಣೆಕಟ್ಟು ಮುಳುಗಡೆಯಾದ ಸಂದರ್ಭದಲ್ಲಿ ಸಂತ್ರಸ್ತರಿಗೆ ಜಮೀನು ಕೊಡುವ ವಿಚಾರವಾಗಿ ನಡೆದ ಪ್ರಕರಣದಲ್ಲಿ ನನ್ನನ್ನು ಕೂಡ ಆರೋಪಿಯನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು 2 ತಿಂಗಳವರೆಗೆ ನ್ಯಾಯಾಂಗ ಬಂಧನದಲ್ಲಿದ್ದೆ. ಸಾರ್ವಜನಿಕರಿಗೆ ಹಣಕಾಸಿನ ವಿಚಾರವಾಗಿ ಮೋಸವಾಗಿದೆ ಎಂದು ನನ್ನ ವಿರುದ್ಧ ಸದರಿ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ನನಗೆ 2016 ರಿಂದ ಆರೋಪಿಯ ಪರಿಚಯವಿರುತ್ತದೆ. ನಮ್ಮ ಫೈನಾನ್ಸ್ ನಲ್ಲಿ ಹಣಸಾಲವಾಗಿ ನೀಡಲು ಗ್ರಾಹಕರಿಂದ ಸಾಲಕ್ಕೆ ಅರ್ಜಿ ಸ್ವೀಕಾರ ಮಾಡುವುದಿಲ್ಲ ಮತ್ತು ಯಾವುದೇ ಆಧಾರವನ್ನು ಪಡೆದುಕೊಳ್ಳುವುದಿಲ್ಲ. ಆರೋಪಿ ಸಾಲ ಕೇಳಿ ಅರ್ಜಿ ಸಲ್ಲಿಸಿರುವುದಿಲ್ಲ ಮೌಖಿಕವಾಗಿ ಕೇಳಿರುತ್ತಾರೆ. ಆರೋಪಿ 2018 ಮಾರ್ಚ್ ತಿಂಗಳಿನಲ್ಲಿ ಹಣ ಬೇಕೆಂದು ಕೇಳಿರುತ್ತಾರೆ. ಮಾರ್ಚ್ ತಿಂಗಳ ಕೊನೆಯ ದಿನದಲ್ಲಿ ನಾನು ಹಣವನ್ನು ನೀಡಿರುತ್ತೇನೆ ತಾರೀಖು ನೆನಪಿಲ್ಲ. ಫೈನಾನ್ಸ್ ನ ಮೂಲಕವಾಗಲೀ ಅಥವಾ ವೈಯಕ್ತಿಕವಾಗಿಯಾಗಲೀ 20 ಸಾವಿರಕ್ಕಿಂತ ಮೇಲ್ಪಟ್ಟ ಹಣವನ್ನು ಸಾಲ ನೀಡುವುದಾದರೆ ಚೆಕ್ ಮೂಲಕ ನೀಡಬೇಕು ಎಂಬ ಮಾಹಿತಿ ನನಗೆ ಗೊತ್ತಿದ್ದೆ. ಆರೋಪಿಗೆ ನಾನು ಹಣವನ್ನು ನಗದಾಗಿ ನೀಡಿರುತ್ತೇನೆ. ಹಣ ನೀಡುವಾಗ ಆರೋಪಿಯಿಂದ ನಾನು ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ಹಣ ವಾಪಸ್ಸು ಕೇಳಿದಾಗ ಆರೋಪಿ ನನಗೆ ಚೆಕ್ ನ್ನು

ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಲ ನೀಡಿದ ಬಗ್ಗೆ ಯಾವುದೇ ಬರವಣಿಗೆಯನ್ನು ಮಾಡಿಕೊಂಡಿರುವುದಿಲ್ಲ ಯಾವುದೇ ದಾಖಲೆಗೆ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಎಷ್ಟು ಶೇಖಡ ಬಡ್ಡಿಗೆ ಸಾಲ ನೀಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಇಲ್ಲಿಯವರೆಗೂ ಆರೋಪಿ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಚೆಕ್ ಅಮಾನ್ಯಗೊಂಡ ನಂತರ ನಾನು ಆರೋಪಿಯ ಬಳಿ ಹಣ ಮರುಪಾವತಿ ಮಾಡುವಂತೆ ಕೇಳಿರುತ್ತೇನೆ. ಸಾಲ ನೀಡಿದಾಗಿನಿಂದ ಚೆಕ್ ಅಮಾನ್ಯಗೊಳ್ಳುವ ಪೂರ್ವದಲ್ಲಿ ನಾನು ಹಣವನ್ನು ವಾಪಸ್ಸು ಕೊಡುವಂತೆ ಆರೋಪಿಯನ್ನು ಕೇಳಿರುತ್ತೇನೆ. ಆರೋಪಿಗೆ ಕರೆ ಮಾಡಿ ಹಣವನ್ನು ಕೊಡುವಂತೆ ಕೇಳಿರುತ್ತೇನೆ. ಯಾವಾಗ ಕೇಳಿರುತ್ತೇನೆ ಎಂದು ನನಗೆ ನೆನಪಿಲ್ಲ. ಆರೋಪಿ ಹಣ ಮರುಪಾವತಿ ಮಾಡುವ ವಿಚಾರವಾಗಿ ಯಾವುದೇ ಉತ್ತರ ನೀಡಿರುವುದಿಲ್ಲ. ಆರೋಪಿ ಹಣ ಪಡೆದ 3 ತಿಂಗಳಲ್ಲಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿರುತ್ತಾರೆ.

2017-18 ರಲ್ಲಿ ನಾನು ಎಷ್ಟು ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ನಮ್ಮ ಕಚೇರಿಯಲ್ಲಿ ಸಿ.ಸಿ ಟಿ.ವಿ ಕ್ಯಾಮರ ಅಳವಡಿಸಿರುವುದಿಲ್ಲ. ಸಕಲೇಶಪುರ ಲೆಕ್ಕಪರಿಶೋಧನೆ ಇಲಾಖೆಯಲ್ಲಿ ನಮ್ಮ ಫೈನಾನ್ಸ್ ನ್ನು ನೊಂದಾಣಿ ಮಾಡಿಸಿರುತ್ತೇನೆ. ಅದನ್ನು ಪ್ರತಿ 4 ವರ್ಷಕ್ಕೊಮ್ಮೆ ರಿನಿವಲ್ ಮಾಡಿಸಿರುತ್ತೇನೆ. ಪ್ರತಿ ವರ್ಷ ಇಲಾಖೆಗೆ ಲೆಕ್ಕ ಪತ್ರಗಳನ್ನು ಸಲ್ಲಿಸಿರುತ್ತೇನೆ. ಸದರಿ ಲೆಕ್ಕ ಪತ್ರದಲ್ಲಿ ವಾರ್ಷಿಕವಾಗಿ ಯಾರಿಗೆ ಎಷ್ಟು ಸಾಲ ಕೊಟ್ಟಿರುತ್ತದೆ ಎಷ್ಟು ಬಾಕಿ ಇದೆ ಒಟ್ಟು ಎಷ್ಟು ವ್ಯವಹಾರ ಆಗಿರುತ್ತದೆ ಎಂಬ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ನಮ್ಮ ಫೈನಾನ್ಸ್ ನಲ್ಲಿ ಲೆಡ್ಜರ್ ನಿರ್ವಾಹಣೆ ಮಾಡುತ್ತೇವೆ. ಸದರಿ ಲೆಡ್ಜರ್ ನಲ್ಲೂ ವಾರ್ಷಿಕವಾಗಿ ಯಾರಿಗೆ ಎಷ್ಟು ಸಾಲ ಕೊಟ್ಟಿರುತ್ತೇವೆ ಎಷ್ಟು ಬಾಕಿ ಇದೆ ಎಂದು ನಮೂದು ಮಾಡಿರುತ್ತೇವೆ. ಅದೇ ಲೆಡ್ಜರ್ ನ್ನು ಲೆಕ್ಕ ಪರಿಶೋಧನೆ ಇಲಾಖೆಗೆ ನೀಡುತ್ತೇವೆ. ನನ್ನ ಕಚೇರಿಯಹಲ್ಲಿ ಲೆಡ್ಜರ್ ಪುಸ್ತಕಗಳು ಮಳೆಯಿಂದ ಹಾನಿಯಾಗಿದ್ದು, ಅದನ್ನು ಹಾಜರುಪಡಿಸಲು ಸಾದ್ಯವಿಲ್ಲ, ಬೇಕಾದರೆ ಸದರಿ ಲೆಡ್ಜರ್ ಮತ್ತು ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನೆ ಇಲಾಖೆಯಿಂದ ತಂದು ಹಾಜರುಪಡಿಸುತ್ತೇನೆ. ನಮ್ಮ ಫೈನಾನ್ಸ್ ಕಚೇರಿಯನ್ನು ಮುಚ್ಚಿ 7-8 ವರ್ಷಗಳಾಗಿರುತ್ತದೆ. ಫೈನಾನ್ಸ್ ನಡೆಸುತ್ತಿದ್ದ ಕಚೇರಿಯಲ್ಲಿ 2 ಭಾಗ ಮಾಡಿ ಇನ್ನೊಂದು ಭಾಗದಲ್ಲಿ ಸೈಬರ್ ನಡೆಸುತ್ತಿದ್ದೆ. ಆ ಬಗ್ಗೆ ಪುರಸಭೆಯಿಂದ ಪರವಾನಗಿಯನ್ನು ಪಡೆದಿರುತ್ತಾನೆ. ಸದರಿ ಸೈಬರ್ ನ್ನು ಸಹ ಮುಚ್ಚಿ 8 ವರ್ಷವಾಗಿರುತ್ತದೆ. ನಾನು 10 ವರ್ಷಗಳಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ . 2018-19 ನೇ ಸಾಲಿನಲ್ಲಿ ಆದಾಯ ತೆರಿಗೆ ರಿಟರ್ನ್ ಸಲ್ಲಿಸಿರುತ್ತೇನೆ. 2018-19 ರಲ್ಲಿ ನನ್ನ ಆಯ್ಯವ್ಯಯಗಳ ಹೇಳಲು ಸಾಧ್ಯವಿಲ್ಲ. ಫೈನಾನ್ಸ್ ನ ಆದಾಯ ತೆರಿಗೆ ರಿಟರ್ನ್ ನಲ್ಲಿ ಫೈನಾನ್ಸ್ ಗೆ ಬರಬೇಕಾದ ಹಣ ಮತ್ತು ಸಾಲ ಕೊಟ್ಟಿರುವ ಹಣದ ಬಗ್ಗೆ

ನಮೂದು ಮಾಡಬೇಕು ಎಂದರೆ ಸಾಕ್ಷಿದಾದರರು 40 ಲಕ್ಷಕ್ಕಿಂತ ಕಡಿಮೆ ಮೊತ್ತವಾಗಿರುವುದರಿಂದ ಆದಾಯ ತೆರಿಗೆ ರಿಟರ್ನ್ ನಲ್ಲಿ ತೋರಿಸುವ ಅವಶ್ಯಕತೆ ಇಲ್ಲ. ಈ ಬಗ್ಗೆ ಲೆಕ್ಕ ಪರಿಶೋಧನೆ ಇಲಾಖೆಯಿಂದ ಸೂಚನೆ ನೀಡಿರುತ್ತಾರೆ. ಆ ಬಗ್ಗೆ ದಾಖಲೆಗಳು ನನ್ನ ಬಳಿ ಇಲ್ಲ . ಲೆಕ್ಕ ಪರಿಶಿೋಧನೆ ಇಲಾಖೆಯವರು ಕಕೊಟ್ಟರೆ ಅ ದನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ನನ್ನ ಹಳೆಯ ಲೈಸೆನ್ಸ್ ನ್ನು ಮತ್ತು 2018-19 ರ ಸಾಲಿನ ರಿನಿವಲ್, ಆದಾಯ ತೆರಿಗೆ ರಿಟರ್ನ್ ನ್ನು ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿದಾರರು ಲೈಸೆನ್ಸ್ ಮತ್ತು ಆದಾಯ ತೆರಿಗೆ ರಿಟರ್ನ್ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಆದರೆ ರಿನಿವಲ್ ಲೆಟರ್ ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ. ( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು)

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**